'ಡ್ಯಾಮ್ ಚೌಕ'ದ ಸುತ್ತ ನಡೆದು ನಡೆದು ಕಾಲು ಸೋತ ಪ್ರವಾಸಿಗರು ವಿಶ್ರಮಿಸಿ ಕುಳಿತಿದ್ದರು. ಕಲ್ಲಿನ ವಿಶಾಲ ಅಂಗಳದಂತಿದ್ದ ವೃತ್ತದಿಂದ 'ಆಮ್‌ಸ್ಟೆಲ್' ನದಿಯತ್ತ ಹೋಗುವ ಕಿರಿದಾದ ಹಲವು ರಸ್ತೆಗಳಲ್ಲಿ ಎಡಕ್ಕೆ ಹೋಗುವ ಒಂದನ್ನು ಆರಿಸಿಕೊಂಡು ಮುಂದೆ ನಡೆದೆವು. ರಸ್ತೆಯ ಅಗಲ ಕಡಿಮೆಯಾಯಿತು. ಗಂಟೆ ಮೂರೋ ನಾಕೋ ಆಗಿರಬೇಕು. ಆರಂಭದಲ್ಲಿ ಅಂಗಡಿಗಳಂತೆ, ಎರಡಂತಸ್ತಿನ ಹೋಟೆಲುಗಳಂತೆ ಕಾಣುವ ಎಲ್ಲಾ ಬಾಗಿಲುಗಳೂ, ಕಿಟಕಿಗಳೂ ಮುಚ್ಚಿದ್ದವು. ಕೆಲವೆಡೆ ಸಣ್ಣ ಸಣ್ಣ ಅಂಗಡಿಗಳು ಗಲ್ಲಿಗಳಲ್ಲಿ ತೆರೆದಿದ್ದವು. ತಿರುವುಗಳಲ್ಲಿ ಕೆಫೆಗಳು ಒಂದೆರಡು ಕಂಡವು. ಇದ್ದಕ್ಕಿದ್ದಂತೆ ಹವಾ ಬದಲಾಯಿತು.

ಅಂದರೆ, ನಾವು ಉಸಿರಾಡುತ್ತಿದ್ದ ಗಾಳಿಯಲ್ಲಿ ದಟ್ಟ ಹೊಗೆಯ ವಾಸನೆ ಭುಗ್ಗೆಂದು ಅಡರಿತು. ಗಾಂಜಾ, ಅಫೀಮು ಇತ್ಯಾದಿಗಳ ಹೊಗೆ ಅದೆಂದು ತಿಳಿಯಲು ಹೆಚ್ಚು ಹೊತ್ತು ಬೇಕಾಗಲಿಲ್ಲ. ಹಾಗಿದ್ದರೆ ನಾವು ಹುಡುಕಿ ಹೊರಟ ಮಾರ್ಗ ಇದೇ ಎಂಬುದು ಖಾತ್ರಿಯಾಯಿತು. ಮುಂದೆ ಚಲಿಸತೊಡಗಿದೆವು. ಇಲ್ಲಿ ಮಾದಕ ವಸ್ತುಗಳು ದೊರಕುವುದು ಎಂಬುದೂ ತಿಳಿದುಬಂತು. ಒಂದು ಅಂಗಡಿ ಬಾಗಿಲು ತೆರೆದಿತ್ತು. ಒಳಗೆ ಎಲ್ಲರೂ ನುಸುಳಿದೆವು. ತರಹೇವಾರಿ ಸಿಗರೇಟು, ತಂಬಾಕು, ಲೈಟರ್‌ಗಳು, ಪೆಪ್ಪರ್‌ಮಿಂಟ್‌ಗಳು ಬಣ್ಣ ಬಣ್ಣವಾಗಿದ್ದವು. ಅದೇ ಕೆಲಸವಾಗಿ ಕೊಳ್ಳಲು ಬಂದವರೆಲ್ಲಾ ತಮ್ಮ ಪಾಡಿಗೆ ತಾವು ಕೊಂಡು ಹೋಗುತ್ತಿದ್ದರು. ನಾವು ಪೊಲೀಸ್ ನಾಯಿಗಳಂತೆ ಅನುಮಾನಾಸ್ಪದವಾಗಿ ಎಲ್ಲವನ್ನೂ ನೋಡುತ್ತಾ ನಡೆದೆವು. ನಮ್ಮ ಜೊತೆಗಿದ್ದ ಯುವಕ ಯುವತಿಯರು ಅಂಗಡಿಯವನನ್ನು ಮಾತನಾಡಿಸಿ ಏನು, ಎತ್ತ, ಯಾವುದು, ಹೇಗೆ ಎಂದು ಪ್ರಶ್ನಿಸುತ್ತಿದ್ದರು. ಆತ ಅತ್ಯಂತ ಉತ್ಸುಕನಾಗಿ ಎಲ್ಲವನ್ನೂ ಬಿಡಿಸಿ ಹೇಳುತ್ತಿದ್ದ.

ಏನೇ ತೆಗೆದುಕೊಂಡು ಪ್ರಯೋಗಿಸಿದರೂ, ಎರಡು ಗಂಟೆ ಕಾಲದ ನಂತರವೇ ಅದರ ಪರಿಣಾಮ ಬೀರುವುದು ಎಂದು ಹೇಳಿದ್ದು ಕಿವಿಯ ಮೇಲೆ ಬಿತ್ತು. ಮಕ್ಕಳ ಬಣ್ಣ ಬಣ್ಣದ ಚಿಕ್ಕ ಚಿಕ್ಕ ಗಾತ್ರದ ಪೆಪ್ಪರ್‌ಮೆಂಟ್, ಚೂಯಿಂಗ್ ಗಮ್, ಲಾಲಿ ಪಾಪ್, ಕ್ಯಾಂಡಿ ಕ್ರಷ್, ಜೆಲ್ಲಿ, ಇನ್ನಿತರ ಮನೋರಂಜನೆಯ ವಸ್ತುಗಳೊಂದಿಗೆ ಇದ್ದವು.

ನಾವುಗಳು ಸಣ್ಣ ಬೀದಿಯಲ್ಲಿ ಎಡ ಬಲ ತಿರುಗುತ್ತಾ ಮೂಲೆಗಳಲ್ಲಿ ದೊಡ್ಡ ಛತ್ರಿಗಳನ್ನು ಹರಡಿಕೊಂಡಿದ್ದ ಬಿಯರ್ ಪಾರ್ಲರ್‌ಗಳನ್ನು ನೋಡುತ್ತಾ ಕಟ್ಟಡಗಳ ಬಾಗಿಲುಗಳನ್ನು, ಕಿಟಕಿ, ಗೋಡೆಗಳನ್ನು ಗಮನಿಸುತ್ತಾ ಹೊರಟೆವು. ಆಮ್‌ಸ್ಟರ್‌ಡ್ಯಾಂನ ಊರ ಮಧ್ಯೆ ಹರಿವ 'ಆಮ್‌ಸ್ಟೆಲ್' ನದಿಯ ಒಂದು ನಾಲೆ ಎದುರಾಯಿತು. ದೋಣಿ ವಿಹಾರದಲ್ಲಿ ಪಟ್ಟಣದಲ್ಲೇ ಒಂದೆಡೆಯಿಂದ ಇನ್ನೊಂದೆಡೆಗೆ ಹೋಗುವ ಈ ನಾಲೆಗಳನ್ನು ನೋಡಿ ಹರ್ಷವಾಯಿತು. ಮುಂದೆ ಹಲವು ಹೆಜ್ಜೆ ಹಾಕುತ್ತಲೇ ಪಬ್ ಎದುರಾಯಿತು. ಪಕ್ಕದ ಅಂಗಡಿಯಲ್ಲಿ ಒಂದು ವಿಶೇಷ ಚಿತ್ರಪಟವಿತ್ತು. ಸುಂದರವಾದ ಕೊಳಲು ಕೃಷ್ಣನ ಫೋಟೊ ಕಂಡು ಅಚ್ಚರಿಯಾಯಿತು. ನಾವೆಲ್ಲರೂ ಇಲ್ಲಿನ ಪಬ್ ನೋಡಲು ಒಳ ನಡೆದೆವು. ಉಸಿರು ಕಟ್ಟುವ ಹವಾ. ಕಣ್ಣೆಲ್ಲಾ ಮಬ್ಬಾಗುವಷ್ಟು ದಟ್ಟ ಹೊಗೆ. ಹಾಗೆಯೇ ನೆಲ ಮಾಳಿಗೆಗೆ ಇಳಿದುಕೊಂಡು ಹೋದೆವು. ಎಲ್ಲಾ ಕುರ್ಚಿಗಳೂ ತುಂಬಿದ್ದವು. ಎಲ್ಲರೂ ಅವರವರ ಲೋಕದಲ್ಲಿದ್ದರು. ನಮ್ಮ ಆಗಮನದಿಂದ ಯಾರೂ ತಲೆ ಕೆಡಿಸಿಕೊಳ್ಳಲಿಲ್ಲ. ಮಂದ ಬೆಳಕಿನಲ್ಲಿದ್ದ ಎಲ್ಲವನ್ನೂ ಅವಲೋಕಿಸಿ ಮೇಲೇರಿ ಬಂದೆವು.

ಕೆನಾಲ್ ಪಕ್ಕದಲ್ಲಿ ಬಣ್ಣ ಬಣ್ಣದ ಆಟೋಗಳು, ಪುಟ್ಟ ಟ್ಯಾಕ್ಸಿಗಳು ಇದ್ದವು. ಸಂಜೆ ವೇಳೆಗೆ ಇವೆಲ್ಲಾ ಜೀವಂತವಾಗುವಂತೆ ಸಿಂಗರಿಸಿಕೊಂಡಿದ್ದವು. ಕೆನಾಲ್‌ನ ಆ ಬದಿಗೆ ಹೋಗಲು ಇದ್ದ ಪುಟ್ಟ ಸೇತುವೆಗಳು ಪ್ರವಾಸಿಗರ ಫೋಟೊ ಪಾಯಿಂಟ್‌ಗಳು. ನಾವೂ ಹಲ್ಲು ಕಿರಿದೆವು.

ಮುಂದೆ ಅವಸರದ ನಡಿಗೆಯಲ್ಲಿ ಸಾಗುತ್ತಿದ್ದಂತೆ ಬಲಕ್ಕೆ ಕಾಲುವೆ ಇದ್ದರೆ, ಎಡಕ್ಕೆ ಆಮ್‌ಸ್ಟರ್‌ಡ್ಯಾಂನ ಹೆಸರುವಾಸಿ ಸ್ಥಳವಾದ, ನಾವು ಕುತೂಹಲದಿಂದ




ಆಮ್‌ಸ್ಟರ್‌ಡ್ಯಾಂ ಪಟ್ಟಣದ ಓಣಿಗಳು

